ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಿಂದಃ-

ನಾನು ಈ ಹಿಂದಿನ ಪಾಟೀ ಸವಾಲಿನಲ್ಲಿ ಜಿ.ಪಿ.ಎ ನನ್ನ ಬಳಿ ಇರುತ್ತದೆ ಎಂದು ನುಡಿದಿದ್ದು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ನುಡಿದು ನನ್ನ ಬಳಿ ಇದ್ದರೆ ಹಾಜರುಪಡಿಸುತ್ತೇನೆ ಎಂದ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಜಿ.ಪಿ.ಎ ಆಗಿದ್ದ ಪಕ್ಷದಲ್ಲಿ ಅದು ನನ್ನ ಬಳಿ ಇರುತ್ತಿತ್ತು ಮತ್ತು ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಮೂಲ ಆಸ್ತಿಯು ಅಬ್ದುಲ್ ಖರೀಂ ಸಾಬ್ ರವರಿಗೆ ಸೇರಿತ್ತು ಎಂದು ಹೇಳಿದ್ದು ಅವರ ವಂಶವೃಕ್ಷವನ್ನು ನಾನು ಪಡೆದುಕೊಂಡಿರುವುದಿಲ್ಲ. ಕ್ರಯ ಪತ್ರದಲ್ಲಿ ತೋರಿಸಿರುವ ಎಲ್ಲಾ ಮಾರಾಟಗಾರರು ಆ ದಿನ ಬಂದಿದ್ದರಿಂದ ಅವರ ಹೆಸರನ್ನು ಪತ್ರದಲ್ಲಿ ತೋರಿಲಾಗಿರುತ್ತದೆ.

ಸರ್ವೇ ನಂಬರ್ 107/1 ರಲ್ಲಿ ನಾನು 24 ಗುಂಟೆ ಜಮೀನನ್ನು ನಾನು ವ್ಯವಸಾಯೇತರ ಭೂಮಿಯಾಗಿ ಭೂ ಪರಿವರ್ತನೆ ಮಾಡಿಸಿರುತ್ತೇನೆ. ಸದರಿ ಜಾಗದಲ್ಲಿ ನೀವು ಎಷ್ಟು ನಿವೇಶನಗಳನ್ನಾಗಿ ವಿಂಗಡಿಸಿರುತ್ತೀರಾ ಎಂದರೆ ಸಾಕ್ಷಿಯ ಲೇಔಟ್ ಮಾಡಿರುವುದಿಲ್ಲ ಆದರೆ ಅಡಿ ಲೆಕ್ಕದಲ್ಲಿ ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಜಾಗದಲ್ಲಿ ನಾನು 16 ರಿಂದ 17 ನಿವೇಶನಗಳನ್ನು ಮಾಡಿ ಪಂಚಾಯಿತಿಯಿಂದ ಖಾತೆಯನ್ನೂ ಸಹ ಮಾಡಿಸಿರುತ್ತೇನೆ ಎಂದರೆ ಸರಿ. ಸದರಿ ಜಾಗದಲ್ಲಿ 20 ಅಡಿ ರಸ್ತೆ ಬಿಟ್ಟಿರುತ್ತೇನೆ. 24

ಗುಂಟೆ ಸ್ವತ್ತಿನಲ್ಲಿ ರಸ್ತೆ ಕಳೆದು ಕೇವಲ 10-11 ನಿವೇಶಗಳನ್ನಾಗಿ ವಿಂಗಡಿಸಬಹುದು ಎಂದರೆ ಸಾಕ್ಷಿ ನಾನು 16-17 ಸೈಟಗಳನ್ನಾಗಿ ವಿಂಗಡಿಸಿರುತ್ತೇನೆ. ದಾವಾ ಆಸ್ತಿಯಲ್ಲ ಸೈಟ್ ಗಳನ್ನು ಮ ಡಿರುವುದಿಲ್ಲ ಸರ್ವೇ ನಂಬರ್ 107/1 ರ ಬೇರೆ ಕಡೆ ನಿವೇಶನಗಳಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ, ವಾದಿಗಳ ಸ್ವತ್ತಿಗೂ ನಮ್ಮ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ.

ವಾದಿಗಳು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸರ್ವೇ ನಂಬರ್ 107/1 ಮತ್ತು 108/1 ರಲ್ಲಿ ಚನ್ನೇಗೌಡರವರಿಗೆ ಸರ್ಕಾರದಿಂದ ಜಮೀನು ಗ್ರ್ಯಾಂಟ್ ಆಗಿತ್ತು ಎಂದರೆ ಸಾಕ್ಷಿಯು 107/1 ರಲ್ಲಿ ಆಗಿರವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುವ ಕ್ರಯ ಪತ್ರವನ್ನು ನಾನು, ಮರಿದೇವರು ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಸರ್ವೇ ನಂಬರ್ 107 ರ ಜಮೀನು ಮೂಲ ಖರೀಂ ಸಾಬ್ ರವರಿಗೆ ಸೇರಿತ್ತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿಗಳ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹ ಮರಿದೇವರ ಮಾತು ಕೇಳಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.